ಒಂದು ಹೊಸ ಉಲ್ಲಾಸವನ್ನು ಹುಟ್ಟಿಸಿಬಿಟ್ಟಿತ್ತು. ಅದು ಗಾಳಿಯ ಶೈತ್ಯದ ಹೊಡೆತವನ್ನು ನಗಣ್ಯವಾಗಿಸುವಂಥ ಉಲ್ಲಾಸ. ತಕ್ಷಣ ಮೈಕೊಡವಿಕೊಂಡು ಎದ್ದು ಮಂಚಿಕೆಯ ಹೊರಗೆ ಬೊಗಳತೊಡಗಿತು. ಹಲ್ಯಾ ಹಲವಾರು ಸಲ 'ಮ್ಚು ಮ್ಚು' ಎಂದು ಚುಂಬನದ ಸದ್ದುಮಾಡಿ ಕರೆದ. ಆದರೆ, ಅವನ ಹತ್ತಿರಕ್ಕೆ ಅದು ಬರಲಿಲ್ಲ. ಹಳುವಿನಲ್ಲಿ ನಾಲ್ಕೂ ಕಡೆ ಓಡಿಕೊಂಡು ಬೊಗಳುತ್ತಲೇ ಇತ್ತು. ಒಂದು ಕ್ಷಣ ಹಲ್ಯಾ ಕಡೆ ಬಂದರೂ ತಕ್ಷಣ ಮತ್ತೆ ಓಡುತ್ತಿತ್ತು. ಕರ್ತವ್ಯವೆಂಬುದು ಅದರ ಮನಸ್ಸಿನಲ್ಲಿ ಇಷ್ಟದಂತೆ ಜಿಗಿದಾಡುತ್ತಿತ್ತು.

ಇನ್ನೂ ಒಂದು ಗಂಟೆ ಕಳೆಯಿತು. ರಾತ್ರಿಯ ಶೈತ್ಯ ಭಯಂಕರವಾಗಿ ಹೆಚ್ಚಾಯಿತು. ಹಲ್ಯಾ ಎದ್ದು ಕುಳಿತ. ಎರಡೂ ಮೊಳಕಾಲುಗಳನ್ನು ಎದೆಗೆ ಅವಚಿಕೊಂಡು ತಲೆಯನ್ನು ಅದರಲ್ಲಿ ತೂರಿಸಿಕೊಂಡ. ರಕ್ತನಾಳಗಳಲ್ಲಿ ರಕ್ತದ ಬದಲು ಹಿಮ ಹರಿಯಲಾರಂಭಿಸಿತು. ಅವನು ಬಗ್ಗಿ, ರಾತ್ರಿ ಇನ್ನೂ ಎಷ್ಟು ಬಾಕಿ ಉಳಿದಿದೆ ಅಂತ ಆಕಾಶದ ಕಡೆ ನೋಡಿದ. ಸಪ್ತರ್ಷಿ ಮಂಡಲದಲ್ಲಿ ಇನ್ನೂ ಅರ್ಧದಷ್ಟೂ ಆಕಾಶದಲ್ಲಿ ಬಂದಿರಲಿಲ್ಲ. ಅವು ಮೇಲಕ್ಕೆ ಬಂದವು ಅಂದರೆ ಬೆಳಗಾದ ಹಾಗೆ. ರಾತ್ರಿ ಇನ್ನೂ ಒಂದು ಪ್ರಹರಕ್ಕಿಂತ ಹೆಚ್ಚು ಇದೆ.

ಹಲ್ಯಾನ ಹೊಲದಿಂದ ಸುಮಾರು ಕಲ್ಲೆಸೆತದಷ್ಟು ದೂರದಲ್ಲಿ ಒಂದು ಮಾವಿನ ತೋಟ ಇತ್ತು. ಎಲೆ ಉದುರಕ್ಕೆ ಆಗಲೇ ಶುರುವಾಗಿಬಿಟ್ಟಿತ್ತು. ತೋಟದಲ್ಲಿ ಎಲೆಗಳ ರಾಶಿಯೇ ಬಿದ್ದಿತ್ತು. ಹಲ್ಯಾನ ಮನಸ್ಸಿನಲ್ಲಿ, 'ಹೋಗಿ ಎಲೆಗಳನ್ನೆಲ್ಲಾ ಒಟ್ಟು ಮಾಡಿಕೊಂಡು ಅವಕ್ಕೆ ಬೆಂಕಿ ಹೊತ್ತಿಸಿ ಯಾಕೆ ಉರಿಮಾಡಬಾರದು. ರಾತ್ರಿ ಹೊತ್ತಿನಲ್ಲಿ ಎಲೆಗಳನ್ನು ಗುಡ್ಡೆ ಹಾಕುತ್ತಿರೋದನ್ನು ಯಾರಾದರೂ ನೋಡಿ ನನ್ನನ್ನು ಯಾವುದೋ ಭೂತ ಅಂತ ಅಂದುಕೊಳ್ಳದೆ ಇದ್ದರೆ ಸಾಕು. ಯಾರಿಗೆ ಗೊತ್ತು ಯಾವುದಾದರೂ ಪ್ರಾಣಿ ಅಡಗಿಕೊಂಡು ಕೂತಿರಬಹುದು. ಆದರೆ, ಈಗ ಇನ್ನು ಹೀಗೆ ಕೂತಿರಕ್ಕಾಗಲ್ಲ' ಎನ್ನುವ ಯೋಚನೆ ಬಂತು.

ಹತ್ತಿರದ ತೊಗರಿ ಹೊಲಕ್ಕೆ ಹೋಗಿ ಸಸಿಗಳನ್ನು ಕಿತ್ತುಕೊಂಡ. ಅವುಗಳನ್ನೆಲ್ಲ ಸೇರಿಸಿ ಒಂದು ಬರಲು ಮಾಡಿದ. ಕೈಯಲ್ಲಿ ಬರಲು ಮತ್ತು ಹೊತ್ತಿಸಿರೋ ಕುಳ್ಳು ಹಿಡಿದುಕೊಂಡು ಮಾವಿನ ತೋಟದ ಕಡೆ ಹೊರಟ. ಜಬರಾ ಅವನನ್ನು ನೋಡಿ ಹತ್ತಿರ ಬಂದು ಬಾಲ ಅಲ್ಲಾಡಿಸತೊಡಗಿತು.

ಹಲ್ಯಾ ಹೇಳಿದ, 'ಇನ್ನು ತಡೆದುಕೊಳ್ಳಕ್ಕಾಗಲ್ಲ ಜಬರೂ. ನಡಿ ತೋಟದಲ್ಲಿ ಎಲೆಗಳನ್ನು ಗುಡ್ಡೆ ಹಾಕಿಕೊಂಡು ಒಂದು ಬೆಂಕಿ ಕಾಯಿಸಣ. ಮೈಗೆ ಒಂದಿಷ್ಟು ಬಿಸುಪು ಮಾಡಿಕೊಂಡು ಆಮೇಲೆ ನಿದ್ದೆ ಮಾಡೋಣ. ರಾತ್ರಿ ಇನ್ನೂ ಬಹಳ ಇದೆ.' ಕುಂಯ್ ಕುಂಯ್ ಎಂದು ಸದ್ದು ಮಾಡುತ್ತ ಜಬರನೂ ಅದಕ್ಕೆ ತನ್ನ ಸಮ್ಮತಿ ವ್ಯಕ್ತಪಡಿಸುತ್ತ ತೋಟದ ಕಡೆಗೆ ನಡೆಯಿತು.

ತೋಟದಲ್ಲಿ ಕತ್ತಲೆ ತುಂಬ ದಟ್ಟವಾಗಿತ್ತು. ಆ ಕತ್ತಲೆಯಲ್ಲಿ ಕ್ರೂರ ಚಳಿಗಾಳಿ ಎಲೆಗಳನ್ನು ಹಿಂಡುತ್ತಿತ್ತು. ಮರಗಳಿಂದ ಹಿಮಬಿಂದುಗಳು ಟಪ್ ಟಪ್ ಎಂದು ಕೆಳಗೆ ಬೀಳುತ್ತಿದ್ದವು.

ಒಮ್ಮೆಲೇ ಬೀಸಿದ ಗಾಳಿಯ ಒಂದು ಹೊಡೆತ ಮದರಂಗಿ ಹೂವುಗಳ ಸುವಾಸನೆಯನ್ನು ಹೊತ್ತು ತಂದಿತು. ಹಲ್ಯಾ, 'ಎಂಥಾ ಒಳ್ಳೇ ಸುವಾಸನೆ ಬಂತು ಜಬರೂ! ನಿನ್ನ ಮೂಗಿನೊಳಕ್ಕೂ ಸ್ವಲ್ಪ ಸುವಾಸನೆ ಬರುತ್ತಾ ಇದೆಯೇನು?' ಎಂದು ಕೇಳಿದ.

ಜಬರನಿಗೆ ನೆಲದ ಮೇಲೆ ಯಾವುದೋ ಒಂದು ಮೂಳೆ ಸಿಕ್ಕಿಬಿಟ್ಟಿತ್ತು. ಅದು ಆ ಮೂಳೇನ ಕಡೀತಾ ಇತ್ತು.

ಹಲ್ಯಾ ಬೆಂಕಿಯನ್ನು ನೆಲದ ಮೇಲಿಟ್ಟು ಎಲೆಗಳನ್ನು ಗುಡ್ಡೆಹಾಕತೊಡಗಿದ. ಸ್ವಲ್ಪ ಹೊತ್ತಿಗೆ ಎಲೆಗಳದೊಂದು ರಾಶಿ ಆಯಿತು. ಕೈಗಳು ಮುದುಡಿಕೊಳ್ಳುತ್ತಿದ್ದವು. ಅದನ್ನು ಲೆಕ್ಕಿಸದೆ ಎಲೆಗಳದೊಂದು ಬೆಟ್ಟ ಮಾಡುತ್ತಾ ಇದ್ದ. ಇದೇ ಬೆಂಕಿಯ ರಾಶಿಯಲ್ಲಿ ಅವನು ಚಳಿಯನ್ನು ಸುಟ್ಟು ಬೂದಿ ಮಾಡಿಬಿಡುತ್ತಾನೆ.

ಸ್ವಲ್ಪ ಹೊತ್ತಿಗೆಲ್ಲ ರಾಶಿ ಹೊತ್ತಿ ಉರಿಯತೊಡಗಿತು. ಅದರ ಜ್ವಾಲೆಗಳು ಮರದ ಎಲೆಗಳಿಗೂ ತಾಕಿ ಇನ್ನೂ ಮೇಲೆ ಹೋಗುತ್ತಿತ್ತು. ಆ ಚಂಚಲ ಬೆಳಕಿನಲ್ಲಿ ತೋಟದ ದೊಡ್ಡ ದೊಡ್ಡ ಮರಗಳು ಗಾಢಾಂಧಕಾರವನ್ನು ತಮ್ಮ ತಲೆಗಳ ಮೇಲೆ ಹೊತ್ತುಕೊಂಡಿರುವಂತೆ ತೋರುತ್ತಿದ್ದವು. ಕತ್ತಲೆಯ ಆ ಅನಂತ ಸಾಗರದಲ್ಲಿ ಈ ಬೆಳಕು ದೋಣಿಯ ಹಾಗೆ ಅತ್ತ ಇತ್ತ ಅಲುಗಾಡುತ್ತ, ಕುಲುಕಾಡುತ್ತ ಇರುವಂತೆ ತೋರುತ್ತಿತ್ತು.

ಹಲ್ಯಾ ಅಗ್ನಿಕುಂಡದ ಮುಂದೆ ಕುಳಿತು